ಹರಿವಿಗಿಂತ 2007–08 ರಿಂದ 2013–14 ರವರೆಗೆ (2012–13 ಹೊರತುಪಡಿಸಿ) ಹೆಚ್ಚುವರಿಯಾಗಿ ನೀರು ಹರಿದಿರುತ್ತದೆ.

ದಿನಾಂಕ: 25.10.2014 ರಂದು Global expression of Interest ಅನ್ನು ಆಹ್ವಾನಿಸಿದ್ದು, 5 ಸಮಾಲೋಚಕರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಚಿರತೆ ಕಾಟ ಮತ್ತು ಮೇಲುಕೋಟೆ ಅಭಯಾರಣ್ಯದ ಅಭಿವೃದ್ಧಿ

889 (1525); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಕಳೆದ ಒಂದು ವರ್ಷದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಎಲ್ಲೆಲ್ಲಿ ಚಿರತೆ ಕಾಟ ಕಂಡು ಬಂದಿದೆ; ಈ ಚಿರತೆಗಳು ಮಾಡಿರತಕ್ಕ ಜನ ಹಾಗೂ ಜಾನುವಾರುಗಳ ಪ್ರಾಣಿಹಾನಿ ಎಷ್ಟು; ಎಷ್ಟು ಚಿರತೆಗಳನ್ನು ಮರಣ ಹೊಂದಿದೆ; ಎಷ್ಟು ಚಿರತೆಗಳನ್ನು ಸೆರೆ ಹಿಡಿಯಲಾಗಿದೆ; (ಪ್ರತಿಯೊಂದು ಪ್ರಕರಣ ವಿವರ ಒದಗಿಸುವುದು)

ಆ) ಚಿರತೆ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಮೃತಪಟ್ಟ ಜನ–ಜಾನುವಾರುಗಳ ಸಂಬಂಧ ಪರಿಹಾರ ಧನವನ್ನು ಮಂಜೂರು ಮಾಡಿ ವಿತರಣೆ ಮಾಡಲಾಗಿದೆಯೇ;

ಇ) ಮೇಲುಕೋಟೆ ಅಭಯಾರಣ್ಯದ ವಿಸ್ತೀರ್ಣ ಎಷ್ಟು; ನಾಗಮಂಗಲ, ಕೆ.ಆರ್.ಪೇಟೆ ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿ ಹರಡಿರುವ ಅರಣ್ಯದ ವಿಸ್ತೀರ್ಣ ಎಷ್ಟು; ಇದರ ಅಭಿವೃದ್ಧಿಗೆ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಕ್ರಮಗಳೇನು; ಅಭಿವೃದ್ಧಿ ಕಾರ್ಯಗಳಿಗೆ ಮಾಡಿರುವ ವೆಚ್ಚ ಎಷ್ಟು; ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ? (ಪೂರ್ಣ ವಿವರ ಒದಗಿಸುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಮಂಡ್ಯ ಜಿಲ್ಲೆಯ ಮದ್ದೂರು ವಲಯದಲ್ಲಿ ವಳಗೆರೆಹಳ್ಳಿ, ಆನೆದೊಡ್ಡಿ, ಕೆ.ಹೊನ್ನಲಗೆರೆ, ಹೆಬ್ಬೆರಳು ಗ್ರಾಮಗಳಲ್ಲಿ, ಮಳವಳ್ಳಿ ವಲಯದ ಕೆಂಪಯ್ಯನದೊಡ್ಡಿ, ಮಲ್ಲಿನಾಥಪುರ ಗ್ರಾಮಗಳಲ್ಲಿ, ಮಂಡ್ಯ ವಲಯದ ಹೊನಗಾನಹಳ್ಳಿ, ಸಾತನೂರುಬೆಟ್ಟ, ಶಂಭೂನಹಳ್ಳಿ, ಶ್ರೀರಂಗಪಟ್ಟಣ ವಲಯದ ಬೆಳಗೋಳ ಗ್ರಾಮ, ಪಾಂಡವಪುರ ವಲಯದ ಕೆಂಚನಹಳ್ಳಿ, ಸಂಕನಹಳ್ಳಿ, ಚಿಕ್ಕಬೋಗನಹಳ್ಳಿ ಗ್ರಾಮಗಳು, ನಾಗಮಂಗಲ ವಲಯದ ಜೋಡಿ ಚಿಕ್ಕನಹಳ್ಳಿ, ತಾವರೆಕೆರೆ, ಕೋಟೆಬೆಟ್ಟ, ಕೆಂದನಹಳ್ಳಿ ಗ್ರಾಮಗಳಲ್ಲಿ ಕೆ.ಆರ್.ಪೇಟೆ ವಲಯದ ಚಿಕ್ಕಳಲೆ, ಕೃಷ್ಣಾಪುರ, ಕೊಟ್ಟಹಳ್ಳಿ ಗ್ರಾಮಗಳಲ್ಲಿ ಚಿರತೆಯ ಹಾವಳಿಯು ವರದಿಯಾಗಿರುತ್ತದೆ.

2014–15ನೇ ಸಾಲಿನಲ್ಲಿ (31/01/2015ರ ವರೆಗೆ) ಚಿರತೆಯ ದಾಳಿಯಿಂದ 01 ಮಾನವ ಪ್ರಾಣ–ಹಾನಿ ಪ್ರಕರಣ ಹಾಗೂ 66 ಜಾನುವಾರು ಹತ್ಯೆ ಪ್ರಕರಣ ವರದಿಯಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ 02 ಚಿರತೆಗಳು ಮೃತಪಟ್ಟಿರುತ್ತದೆ.

<u>ಚಿರತೆಗಳನ್ನು ಸೆರೆಹಿಡಿದಿರುವ ವಿವರ ಕೆಳಕಂಡಂತಿದೆ:–</u>

1. ಪಾಂಡವಪುರ ವಲಯದ ಹಸನಪುರ ಮಾವಿನ ತೋಟದ ಪಕ್ಕದಲ್ಲಿನ ಚಿರತೆಯನ್ನು ದಿ: 03.08.2014 ರಂದು ಸೆರೆಹಿಡಿದು ಕಾವೇರಿ ವನ್ಯಜೀವಿ ವಿಭಾಗದ ಸತ್ಯಮಂಗಲ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.
2. ಪಾಂಡವಪುರ ವಲಯದಲ್ಲಿನ ಚಿಕ್ಕಮರಳಿ ಗ್ರಾಮದಲ್ಲಿದ್ದ ಚಿರತೆಯನ್ನು ದಿ: 07.01.2015 ರಲ್ಲಿ ಸೆರೆಹಿಡಿದು ಬಂಡೀಪುರ ಹುಲಿ ಸಂರಕ್ಷಣೆ ವಲಯದ ಮೂಲೆ ಹೊಳೆ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.

3. ಪಾಂಡವಪುರ ವಲಯದ ಯೋಗನರಸಿಂಹಸ್ವಾಮಿ ದೇವಸ್ಥಾನದ ತಪ್ಪಲಿನಲ್ಲಿ ಅರೆ ಪ್ರಜ್ಞೆಯಲ್ಲಿದ್ದ ಚಿರತೆಯನ್ನು ಪಶು ವೈದ್ಯಾಧಿಕಾರಿಗಳಿಂದ ಚಿಕಿತ್ಸೆ ಕೊಡಿಸಿ ಬಂಡೀಪುರ ಹುಲಿ ಸಂರಕ್ಷಣೆ ವಲಯಕ್ಕೆ ಬಿಡಲಾಗಿದೆ.
4. ಪಾಂಡವಪುರ ವಲಯದಲ್ಲಿ ಕುಂತಿಬೆಟ್ಟದಿಂದ ವಡ್ಡರಹಳ್ಳಿಯಿಂದ ಹುಸೇನಪುರದವರೆಗೆ ಅಡ್ಡಾಡಿ ತೊಂದರೆ ಕೊಡುತ್ತಿದ್ದ ಚಿರತೆಯನ್ನು ದಿ: 18.08.2014 ರಂದು ಸೆರೆ ಹಿಡಿದು ಕೊಳ್ಳೇಗಾಲ ವಿಭಾಗ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.

ಆ) ರಾಜ್ಯದಲ್ಲಿ ಚಿರತೆ ಹಾವಳಿ ತಡೆಗಟ್ಟಲು, ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ತಮ್ಮ ತಮ್ಮ ವಿಭಾಗಗಳಲ್ಲಿ 3–4 ಜನರನ್ನೊಳಗೊಂಡ ರಕ್ಷಣಾ ಪಡೆಯನ್ನು ರಚಿಸಿ ಹಾವಳಿ ಪ್ರದೇಶಗಳನ್ನು ಗುರುತಿಸಿ ಜನಸಂಪರ್ಕ ಸಭೆ ನಡೆಸಲು ಹಾಗೂ ಮುಂಜಾಗ್ರತಾ ಕ್ರಮವಾಗಿ ಹಾವಳಿ ಇರುವ ಕಡೆ ರಾತ್ರಿ ಗಸ್ತು ಮಾಡಲು ಮತ್ತು ಚಿರತೆ ಹಿಡಿಯಲು ಬೇಕಾದ ಬೋನು, ಮತ್ತಿತರೆ ಉಪಕರಣಗಳನ್ನು ಸಿದ್ಧತೆ ಮಾಡಿಕೊಂಡಿರುತ್ತಾರೆ. ಅಲ್ಲದೆ ನಿರಂತರವಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳು ಸಾರ್ವಜನಿಕರಿಗೆ ತಿಳುವಳಿಕೆ ನೀಡುವುದಲ್ಲದೇ ಕಾಡಂಚಿನಲ್ಲಿ ವಾಸಿಸುವ ಜನರಿಗೆ ಹೆಚ್ಚಿನ ತಿಳುವಳಿಕೆ ನೀಡುವಂತೆ ರಾಜ್ಯ ಎಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಚಿರತೆ ದಾಳಿಯಿಂದ ಮಾನವ–ಪ್ರಾಣಹಾನಿ ಮತ್ತು ಜಾನುವಾರು ಹತ್ಯೆ ಪ್ರಕರಣಗಳಿಗೆ ನಿಯಮಾನುಸಾರ ದಯಾತ್ಮಕ ಧನ ಪಾವತಿಸಲಾಗಿರುತ್ತದೆ.

ಇ) ಮೇಲುಕೋಟೆ ಅಭಯಾರಣ್ಯದ ಒಟ್ಟು – ವಿಸ್ತೀರ್ಣ 12361 ಎಕರೆ 21 ಗುಂಟೆ ಇದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತಿವೆ.

1. ನಾಗಮಂಗಲ ತಾಲ್ಲೂಕು – 1866 ಎಕರೆ 08 ಗುಂಟೆ
2. ಪಾಂಡವಪುರ ತಾಲ್ಲೂಕು – 5764 ಎಕರೆ 10 ಗುಂಟೆ
3. ಕೆ.ಆರ್.ಪೇಟೆ ತಾಲ್ಲೂಕು – 4731 ಎಕರೆ 03 ಗುಂಟೆ

ಮೇಲುಕೋಟೆ ಅಭಯಾರಣ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ, ವನ್ಯಪ್ರಾಣಿ ರಕ್ಷಣೆ/ಸಂರಕ್ಷಣೆಗಾಗಿ ಕೆರೆಗಳ ಹೂಳೆತ್ತುವುದು, ಗಲ್ಲಿಚೆಕ್ಸ್, ಕಾಸ್‌ವೇ, ಕೆರೆ ನಿರ್ಮಾಣ, ರಸ್ತೆಗಳ ನಿರ್ವಹಣೆ ಮತ್ತು ಬೆಂಕಿ ರಕ್ಷಣೆ ಮುಂತಾದ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಈ ಕಾರ್ಯಗಳಿಗಾಗಿ ಈ ಕೆಳಕಂಡಂತೆ ವೆಚ್ಚ ಭರಿಸಲಾಗಿದೆ:–

ಕ್ರ.ಸಂ.	ವರ್ಷ	ವೆಚ್ಚ ಭರಿಸಿದ ಮೊತ್ತ (₹ ಲಕ್ಷಗಳಲ್ಲಿ)
1	2011–12	59.733
2	2012–13	65.054
3	2013–14	71.094

ಯುವ ಸಬಲೀಕರಣ ಮತ್ತು ಕ್ರೀಡಾ ಯೋಜನೆಗಳು

890 (1492); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ

ಅ) ರಾಜ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಯೋಜನೆಗಳಾವುವು; ಹೊಸ ಯೋಜನೆಗಳನ್ನು ಜಾರಿಗೆ ತರಲಾಗುವುದೇ; (ವಿವರ ನೀಡುವುದು)

ಆ) ಈ ಯೋಜನೆಗಳ ಗ್ರಾಮಾಂತರ ಮಟ್ಟದಲ್ಲಿಯೂ ತಲುಪುತ್ತಿದೆಯೇ; (ವಿವರ ನೀಡುವುದು)

ಇ) ಈ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನ ಬಿಡುಗಡೆಯಾಗಿದೆಯೇ; ಅನುದಾನವನ್ನು ಯಾವ ನಿಯಮಾನುಸಾರ ಬಿಡುಗಡೆ ಮಾಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)